ಅದನ್ನೆಲ್ಲ ನೋಡಿದ ಅವನ ಮೈ ಉರಿಯಿತು. ಸಾಕ್ಷಾತ್ ಜಮದಗ್ನಿಯೇ ಆದ. ಅಲ್ಲಿಯೇ ಇದ್ದ ಕತ್ತಿಯನ್ನು ಎತ್ತಿಕೊಂಡ. 'ಬಾಗಿಲು ತೆಗಿಯೇ ಹಲ್ಕಟ್ ರಂಡೇ! ಎಷ್ಟು ದಿನದಿಂದ ನಡೀತಾ ಉಂಟೇ ಈ ವ್ಯವಹಾರಾ? ಬಾಗಿಲು ತೆಗಿಯೇ!' ಅಂತ ಬೊಬ್ಬೆ ಹೊಡೆದ. ಸುಮಾರು ಹೊತ್ತಾಯಿತು ಅವಳು ಬಾಗಿಲು ತೆಗೀಲಿಲ್ಲ. ಮಧ್ಯರಾತ್ರಿ ಎರಡು ಗಂಟೆಯ ಹೊತ್ತು. ಆಚೆ ಈಚೆ ಮನೆಯವರು 'ಯೆಂತ ಮಾಧವಣ್ಣಾ? ರಾತ್ರಿಯ ಹೊತ್ತು ನಿಮ್ಮದು ಗಲಾಟೆ?' ಅಂತ ಕೇಳ್ತಾ ಬಂದ್ರು. 'ನೋಡಿ ನೋಡಿ.. ಈ ಹಲ್ಕಟ್ ಮಾಡುವ ಕೆಲಸವನ್ನು. ನಾನು ಇಲ್ಲದೇ ಇರೂವಾಗ ಯಾರ್ಯಾರನ್ನೋ ಎಲ್ಲ ಮನೆಯ ಒಳಗೆ ಕರ್ಕೊಂಡಿದ್ದಾಳೆ. ಈಗ ನಾನು ಬಂದಿದ್ದೇನೆ ಅಂತ ಹೆದರಿ ಬಾಗಿಲು ತೆಗೀತಾ ಇಲ್ಲ. ಯೇಯ್ ತೆಗಿಯೇ!' ಅಂತ ಬೊಬ್ಬೆ ಹೊಡೆದ. ಅವಳು ಮೆಲ್ಲ ಬಾಗಿಲು ತೆಗೆದಳು. ಒಮ್ಮೆಲೇ ರಾವು ಹೊಡೆದವರ ಹಾಗೆ ಅವ ಒಳಗೆ ಹೋದ. ಅಲ್ಲಿ ಇದ್ದ ಹೆಂಗಸರ ಜುಟ್ಟು ಹಿಡ್ದು ಹೊಡೀಲಿಕ್ಕೆ ಹೋದ. ಆದ್ರೆ ಊರಿನವರು ಬಿಡ್ಲಿಲ್ಲ. ಇಡೀ ಮನೆ ಹುಡುಕಿದ್ರೂ ಒಂದು ಗಂಡಸು ಸಾ ನೋಡ್ಲಿಕ್ಕೆ ಸಿಗ್ಲಿಲ್ಲ. 'ವಾಯ್ ಮಾರ್ರೆ ನಿಮಿಗೆ ಮರ್ಲಾ ಅತವಾ ಕುಡ್ದು ಬಂದಿದ್ದೀರಾ? ಹೆಣ್ಣು ಹೆಂಗಸು ಒಬ್ಬಳೇ ಇರ್ಲಿಕ್ಕೆ ಕಷ್ಟ ಆಗ್ತದೆ ಅಂತ ಹೆದರಿ ಒಟ್ಟಿಗೆ ಮಲಕ್ಕೊಳ್ಳಿಕ್ಕೆ ಪರಿಚಯದ ಹೆಂಗಸರನ್ನು ಬರ್ಲಿಕ್ಕೆ ಹೇಳಿದ್ರೆ ನೀವು ಹೀಗೆಲ್ಲ ಆಪಾದನೆ ಮಾಡುದಾ ಮಾರ್ರೆ? ನಮ್ಮ ನಿದ್ರೆ ಹಾಳು ಮಾತ್ರ ಅಲ್ಲ ಅವರ ಮರ್ಯಾದಿ ಸಾ ಸುಮಾರು. ಹೋಗಿ ಹೋಗಿ. ಮನೆಗೆ ಹೋಗಿ ಹೆಂಡತಿಯ ಹತ್ರ ಮಾಫಿ(ಕ್ಷಮೆ) ಕೇಳಿ' ಅಂತ ಅಲ್ಲಿ ಇದ್ದವರು ಹೇಳಿ ಹೋದ್ರು. 'ಪ್ರಾಯ ಆಗ್ತಾ ಬಂತು ಮಂಡೆ ಬಿಂಗ್ರಿ ಆಗಿರ್ಬೇಕು' ಅಂತ ಮಾತಾಡಿಕೊಳ್ತಾ ಹೋದ್ರು.

ಮಾಧವನಿಗೆ ಎಲ್ಲ ಅಯೋಮಯ. ಎಲ್ಲ ಹೋದ ಮೇಲೆ ದಿವ್ಯ ತನ್ನೊಟ್ಟಿಗೆ ಇದ್ದ ಹೆಂಗಸರ ಕೈ ಹಿಡ್ಕೊಂಡು

'ಉರಗವೇಣಿಯರೆಲ್ಲ ಕೇಳಿರಿ
ಸುರನದಿಯೊಳು ಹಲ ವಿಧದಿ
ಸರಸದಿಂ ಜಲಕೇಳಿಯಾಡುವ ಏಳಿ'

ಅಂತ ಹಾಡ್ತಾ ಕೇಕೆ ಹಾಕ್ತಾ ಮನೆಯ ಒಳಗೆ ಕರ್ಕೊಂಡು ಹೋಗಿ ಬಾಗಿಲು ಹಾಕ್ಕೊಂಡ್ಳು. ಮಾಧವ ಹೊರಗೇ ನಿಂತಿದ್ದ.

ಈಗ ಮಾಧವ ಮೇಳ ವೇಷ ಎಲ್ಲ ಬಿಟ್ಟು ಎಲ್ಲಿ ಹಲ್ಲಿ ಕಾಣ್ತದಾ ಅದನ್ನು ಹೊಡೀತಾ ಇರ್ತಾನೆ.

---


## ಪಿ.ಬಿ. ಪ್ರಸನ್ನ

ಲೇಖಕರು ಮೂಲತಃ ಉಡುಪಿಯವರು. ಎರಡು ದಶಕಗಳಿಂದ ಕನ್ನಡ ಉಪನ್ಯಾಸಕ ವೃತ್ತಿಯಲ್ಲಿದ್ದಾರೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 'ಡೀಸೆಂಟಾಗಿ ಬಯ್ಯುವುದು', 'ಸುಳ್ಳಿಗೆ ಜಯವೆನ್ನಿ' ಇವರ ಹಾಸ್ಯ ಲೇಖನಗಳ ಸಂಕಲನಗಳು. 'ಗಣಪ ಮತ್ತು ಗಾಂಪ', 'ಮಣ್ಣಿಂದ ಕಾಯ', 'ತನುವಿನೊಳಗೆ ಹುಸಿತುಂಬಿ' ಕಥಾಸಂಕಲನಗಳಾದರೆ, 'ಮಂಚ ಮತ್ತು ಒಡಲು' ಕವನ ಸಂಗ್ರಹವಾಗಿದೆ.